quickmarketreports.com

Date : 27-10-2015

# JAU ವರದಿಯ ಪ್ರಕಾರ ನೆಲಗಡಲೆ ದರ ಹೆಚ್ಚಳ ಸಂಭವ

ಜುನಾಗಢ ಕೃಷಿ ವಿಶ್ವವಿದ್ಯಾಲಯ (JAU) ಮುನ್ಸೂಚನಾ ವರದಿಯು ನವೆಂಬರ್ 2015 ಮತ್ತು ಜನವರಿ 2016 ರ ಅವಧಿಯಲ್ಲಿ ನೆಲಗಡಲೆ ದರ ಹೆಚ್ಚಳವಾಗುವ ಮುನ್ಸೂಚನೆ ನೀಡಿದೆಯೆನ್ನಲಾಗಿದೆ. ಗುಣಮಟ್ಟದ ಬೆಳೆ ಲಭ್ಯತೆಯ ಕೊರತೆ ಹಾಗೂ ಆಂತರಿಕ ಮತ್ತು ರಫ್ತು ಬೇಡಿಕೆಗಳು ದರ ಹೆಚ್ಚಳಕ್ಕೆ ಕಾರಣವಾಗಬಹುದೆನ್ನಲಾಗಿದೆ.

ವರದಿಯನ್ವಯ ಚಿಕ್ಕ ಗಾತ್ರದ ನೆಲಗಡಲೆ ದರ 20 ಕಿಲೋಗ್ರಾಂಗೆ ರೂ 820–900, ಮತ್ತು ದೊಡ್ಡಗಾತ್ರದ ನೆಲಗಡಲೆ ದರ ರೂ 860–940ಕ್ಕೆ ಹೆಚ್ಚಳವಾಗುವ ಸಾಧ್ಯತೆಯೆದೆಯೆನ್ನಲಾಗಿದೆ (2015 ನವೆಂಬರ್ ಮತ್ತು 2016 ಜನವರಿ ಅವಧಿಯಲ್ಲಿ) ಈಗ ದರ 20 ಕಿಲೋ ಗ್ರಾಂಗೆ ರೂ 800–860 ಇದೆಯೆನ್ನಲಾಗಿದೆ.

ಆರಂಭದ ಅವಧಿಯಲ್ಲಿ ಮುಂಗಾರು ಮಳೆ ಉತ್ತಮವಿದ್ದರೂ ಆಗಸ್ಟ್ ಮತ್ತು ಸಪ್ಟೆಂಬರ್ ತಿಂಗಳಲ್ಲಿಯ ಒಂದೂವರೆ ತಿಂಗಳು ಅವಧಿಯ ಒಣ ಹವೆ, ನೆಲಗಡಲೆ ಫಸಲು ಫಲಿಸುವ ಸಂದರ್ಭದಲ್ಲಿ ದುಷ್ಪರಿಣಾಮ ಬೀರಿದ್ದರಿಂದ ಇಳುವರಿ ಸಾಮಾನ್ಯಕ್ಕಿಂತ ಕಡಿಮೆಯಾಗಬಹುದೆಂದು ಅಧ್ಯಯನ ವರದಿ ಹೇಳಿದೆ.

ಹಿಂದಿನ ವರ್ಷದ 3.93 ಮಿಲಿಯನ್ ಹೆಕ್ಟೇರ್‌ನಷ್ಟೇ ಆದರೆ ಸ್ವಲ್ಪ ಕಡಿಮೆ 3.91ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ ನೆಲಗಡಲೆ ಬಿತ್ತನೆಯಾಗಿತ್ತೆನ್ನಲಾಗಿದೆ. ಇದರಂತೆ ಉತ್ಪಾದನೆಯೂ ಸುಮಾರು ಹಿಂದಿನ ವರ್ಷದಷ್ಟೇ 5.1ಮಿಲಿಯನ್ ಟನ್‌ಗಳಾಗಬಹುದೆಂದು ಕೇಂದ್ರ ಸರಕಾರದ ಕೃಷಿ ಇಲಾಖೆಯ ಪ್ರಥಮ ಮುನ್ಸೂಚನಾ ವರದಿಯಲ್ಲಿ ಹೇಳಿದೆಯೆನ್ನಲಾಗಿದೆ. ಆದರೆ ಫಲಿತದ ಸಮಯದಲ್ಲಿ ಒಣ ಹವೆಯಿಂದ ಉತ್ಪಾದನೆ ಪ್ರಮುಖವಾಗಿ ಗುಜರಾತ್‌ನಲ್ಲಿ ಸಾಮಾನ್ಯಕ್ಕಿಂತ ಕಡಿಮೆಯಾಗಲಿದೆಯೆನ್ನಲಾಗಿದೆ.